ಕಾಯಿಲೆ ಏನೆಂದು ಮಗಳಾಗಿ ನನಗೆ ಗೊತ್ತಾಗದಿದ್ದರೆ ಹೇಗೆ' ಅನ್ನುತ್ತಾ ಅತ್ತ ಬಂದಳು ರಜನಿ. ಪ್ರಕಾಶರಾವು ನಗುತ್ತಾ 'ಇದನ್ನ ಸೂಪರ್ ಮಾಮ್ ಸಿಂಡ್ರೋಮ್ ಅಂತಾರಮ್ಮಾ' ಅಂದ.

'ನಿಜಕ್ಕೂ ನನ್ನ ಅಮ್ಮ ಸೂಪರ್ ಮಾಮೇ ಅಂಕಲ್' ರಜನಿ ಕಣ್ಣು ಒರೆಸಿಕೊಂಡಳು.

'ಅದೇನಮ್ಮಾ ಅವಳಿಗೆ ಬಂದಿರುವ ಕಾಯಿಲೆ' ಅಂದ.

'ಅದು ಹೇಗೆ ಬಂತು ಸತಾಯಿಸದೇ ಹೇಳಿ ಅಂಕಲ್' ಸುಶೀಲ ಸಿಡುಕಿದಳು.

'ನಮ್ಮ ಅನುರಾಧಾಳಿಗೆ ಪ್ರಪಂಚದಲ್ಲಿರುವ ಎಲ್ಲಾ ಹೆಂಗಸರಿಗಿಂತ ತಾನು ಬುದ್ಧಿವಂತೆ, ಸಮರ್ಥೆ ಅಂತ ಬಲವಾದ ನಂಬಿಕೆ. ಅವಳ ದೃಷ್ಟಿಯಲ್ಲಿ ಜಾಣ್ಮೆ ಅಂದರೆ ಚಂದದ ಮನೆ ಕಟ್ಟಿಸುವುದು, ಅದನ್ನು ಫಳ ಫಳ ಹೊಳೆಯುವ ಹಾಗೆ ನೋಡಿಕೊಳ್ಳುವುದು, ಸಾಧ್ಯವಾದಷ್ಟು ಹಣ ಗಳಿಸುವುದು, ಕಷ್ಟಪಟ್ಟು ದುಡಿಯುವುದು, ಮಕ್ಕಳನ್ನು ಒಳ್ಳೆಯ ಸ್ಥಾನದಲ್ಲಿ ನೋಡುವುದು. ಅಂದರೆ ಡಾಕ್ಟರು, ಎಂಜಿನಿಯರು ಮಾಡಿ ಸ್ಟೇಟ್ಸ್‌ಗೆ ಕಳಿಸುವುದು. ಸಾಧ್ಯವಾಗದೇ ಹೋದರೆ ಅಮೆರಿಕದಲ್ಲಿರುವ ಗಂಡನ್ನು ಹುಡುಕಿ ಮದುವೆ ಮಾಡುವುದು – ಇದೇ ಅವಳ ಬದುಕಿನ ಗುರಿ. ಈ ಗುರಿ ಸಾಧನೆಗೆ ಇನ್ನಿಲ್ಲದಂತೆ ಶ್ರಮಿಸಿದಳು. ಅವಳ ಉದ್ದೇಶ ಫಲಿಸಿತು' ಎಂದು ಪ್ರಕಾಶರಾವು ತಡೆದು ನಿಂತ.

'ಅದಕ್ಕೂ ಈ ಕಾಯಿಲೆಗೂ ಏನು ಸಂಬಂಧ?' ರಜನಿ ಸಿಡುಕಿದಳು.

'ಇದೆ ಕಣಮ್ಮಾ – ಈ ಧ್ಯೇಯ ಸಾಧನೆಯಲ್ಲಿ ನಿಮ್ಮ ಅಮ್ಮನಿಗೆ ತನ್ನ ಮನಸಿಗೆ ಬೇಕಿರುವುದು ಏನು, ತನ್ನ ದೇಹಕ್ಕೆ ಬೇಕಿರುವುದೇನು ಅನ್ನೋದರ ಗೊಡವೆಯೇ ಇರಲಿಲ್ಲ. ಥರಹೇವಾರಿ ಅಡುಗೆ ಮಾಡಿ ತಿನ್ನುವುದು, ಖರೀದಿಸಿದ ಸೀರೆಗಳಿಗೆ ಗಂಜಿ ಹಾಕಿ ಉಡುವುದು, ಸ್ನೇಹಿತರ, ನೆಂಟರ ಕಣ್ಣಿಗೆ ವಿಶೇಷವಾಗಿ ಕಾಣುವುದು, ಇದೇ ತನಗೆ ಬೇಕಿರುವುದು ಅಂದುಕೊಂಡಳು. ಹಣ ಕೂಡಿಡಲು ನಿಮ್ಮಮ್ಮ ಯಂತ್ರದ ಹಾಗೆ ದುಡಿದಳು. ಸ್ವಚ್ಛತೆ ಬೇಕೆಂದು ಎಲ್ಲಾ ಕೆಲಸ ತಾನೇ ಮಾಡುತ್ತಿದ್ದಳು. ನಿಮ್ಮ ಅಪ್ಪನನ್ನು ಸೋಮಾರಿಯಾಗಿ ಕೂರಿಸಿ ಕಾಫಿ ಕೈಗಿಡುತ್ತಿದ್ದಳು. ಹೆಚ್ಚು ಹಣ ಕೊಟ್ಟು ಕೆಲಸದವರಿಗೆ ಕೆಲಸ ಒಪ್ಪಿಸುವುದು ಇಷ್ಟವಿಲ್ಲದೇ ಎಲ್ಲಾ ಕೆಲಸ ತಾನೇ ಮಾಡುತ್ತಾ, ತಾನು ಮಾಡಿದರೆ ಮಾತ್ರ ತನಗೆ ಸಮಾಧಾನ ಅಂತ ನೆಪ ಹೇಳುತ್ತಿದ್ದಳು. ಸಂಜೆಯ ಹೊತ್ತಿಗೆ ವಿಪರೀತ ಆಯಾಸ. ಬ್ಯಾಂಕಿನಲ್ಲಿ ಹಣದ ವ್ಯವಹಾರ ಎಷ್ಟೊಂದು ಎಚ್ಚರದಿಂದ ಮಾಡಬೇಕೋ ನಿನಗೆ ಗೊತ್ತೇ ಇದೆಯಲ್ಲ! ಅವಳು ಬ್ಯಾಂಕಿನಲ್ಲಿ ಹಾಗೆ ದುಡಿದು, ಬರುವಾಗ ತರಕಾರಿ, ಅಡುಗೆ ಸಾಮಾನು ಹೊತ್ತುಕೊಂಡು ಬರುತ್ತಿದ್ದಳು. ಮನೆಗೆ ಬರುತ್ತಲೇ ಗುಡಿಸುವುದು, ತೊಳೆಯುವುದು, ಅಡುಗೆ ಕೆಲಸ.



ಈ ಒತ್ತಡ ತಡೆಯಲು ಆಗದೇ ದಿನಾಲೂ ಸಂಜೆ ತಲೆ ನೋವಿಗೆ ಮಾತ್ರೆ ನುಂಗುತ್ತಿದ್ದಳು. ಹಾಗೆ ಹದಿನೈದು ವರ್ಷದಿಂದ ಎಷ್ಟೊಂದು ಮಾತ್ರೆ ನುಂಗಿರುವಳೋ ನೋಡು. ಅದು ಒಂದು ಕಡೆಯಾದರೆ, ಆಕೆಗೆ ತಾನು ಅಂದುಕೊಂಡ ಪ್ಲಾನಿನ ಪ್ರಕಾರ ಕೆಲಸ ಮುಗಿಯಬೇಕು. ಹಾಗೆ ನಡೆಯಬೇಕಾದರೆ ದೇಹದಲ್ಲಿ ಯಾವ ದೋಷವೂ ಇರಬಾರದು. ಜ್ವರ ಬಂದರೆ ಕ್ರೋಸಿನ್ ನುಂಗುವುದು, ಬೆನ್ನು ನೋವಿಗೆ ಮತ್ತಿನ್ನೇನೋ ನುಂಗುವುದು, ಹೀಗೆ ಸ್ವಂತ ಚಿಕಿತ್ಸೆ ತುಂಬಾನೇ ಇತ್ತು. ಇಷ್ಟಲ್ಲದೆ ಮದುವೆ, ಹಬ್ಬ, ಪೂಜೆಗಳಿಗೆ ಹಾಜರಾಗಬೇಕಾದರೆ ಮುಟ್ಟಾಗಬಾರದು. ಅದನ್ನ ಎರಡು ಮೂರು ದಿನ ತಡೆಯಲು ಮಾತ್ರೆ